# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್/2053/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 01/07/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಎನ್. ಜಯಕರ್ ಶೆಟ್ಟಿ, ಲೆಕ್ಕಾಧಿಕಾರಿ, ಉಡುಪಿ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ (ನಿ), ಉಡುಪಿ (2) ಶ್ರೀಮತಿ ಕೆ. ಸರೋಜಿನಿ, ಕಾರ್ಯದರ್ಶಿ (ಪ್ರಭಾರ), ಉಡುಪಿ ತಾಲೂಕ್ ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘ, ಉಡುಪಿ, (3) ಶ್ರೀಮತಿ ಕೆ. ಚಂದ್ರಪ್ರತಿಮಾ, ಉಪ ನಿಬಂಧಕರು (ಪ್ರಭಾರ), ಉಪ ನಿಬಂಧಕರವರ ಕಛೇರಿ, ಉಡುಪಿ ತಾಲೂಕು, ಕೃಷಿ ಉತ್ಮನ್ನ ಸಹಕಾರ ಮಾರುಕಟ್ಟೆ ಸಂಘ, ರಜತಾದ್ರಿ, ಮಣಿಪಾಲ್ ಮತ್ತು (4) ಶ್ರೀ ಪ್ರವೀಣ್ ಬಿ. ನಾಯಕ್, ಉಪ ನಿಬಂಧಕರು, ಉಪ ನಿಬಂಧಕರ ಕಛೇರಿ, ಉಡುಪಿ ತಾಲೂಕು, ಕೃಷಿ ಉತ್ಮನ್ನ ಸಹಕಾರ ಮಾರುಕಟ್ಟೆ ಸಂಘ, ರಜತಾದ್ರಿ, ಮಣಿಪಾಲ್ ಇವರುಗಳು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ. ದುರ್ನಡತೆಯ ಬಗ್ಗೆ

---

ಪ್ರಕರಣದ ದೂರುದಾರರಾದ ಶ್ರೀ ಐ. ಪ್ರಭಾಕರ್ ಅಮನ್ನ (ಇನ್ನು ಮುಂದೆ ಇವರನ್ನು ಅನುಕೂಲಕ್ಕಾಗಿ 'ದೂರುದಾರರು' ಎಂದು ಸಂಭೋದಿಸಲಾಗುವುದು) ಇವರು (1) ಶ್ರೀ ಎನ್. ಜಯಕರ ಶೆಟ್ಟಿ, ಲೆಕ್ಕಾಧಿಕಾರಿ, ಉಡುಪಿ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ, ಉಡುಪಿ (ಇವರನ್ನು ಇನ್ನು ಮುಂದೆ 1ನೇ 'ಎದುರುದಾರರು' ಎಂದು ಅನುಕೂಲಕ್ಕಾಗಿ ಸಂಭೋದಿಸಲಾಗುವುದು) ಇವರ ವಿರುದ್ಧ ದೂರನ್ನು ಈ ಸಂಸ್ಥೆಗೆ ಸಲ್ಲಿಸಿ, ಇವರು ಉಡುಪಿ ತಾಲೂಕಿನ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇವರ ವಯೋ ನಿವೃತ್ತಿ ದಿನಾಂಕವು 31-08-2014 ಆಗಿದ್ದರೂ ಸಹ ಸದರಿ ಸಹಕಾರ ಸಂಘದ ವ್ಯವಸ್ಥಾಪಕ ಸದಸ್ಯರುಗಳೊಡನೆ ಶಾಮೀಲಾಗಿ ಸುಳ್ಳು ಮಾಹಿತಿ ನೀಡಿ ತಮ್ಮ ವಯೋ ನಿವೃತ್ತಿ ದಿನಾಂಕವನ್ನು 3 ವರ್ಷಗಳಿಗೆ ವಿಸ್ತರಿಸಿ ಇತರೆ ಸಿಬ್ಬಂದಿ ವರ್ಗದವರಿಗೆ ಸಿಗುವ ಪದೋನ್ನತಿಯನ್ನು ಇಲ್ಲದಂತೆ ಮಾಡಿ ಅನ್ಯಾಯವೆಸಗಿರುತ್ತಾರೆಂದು, ಇದರಲ್ಲಿ (2) ಶ್ರೀಮತಿ ಕೆ. ಸರೋಜಿನಿ, ಕಾರ್ಯದರ್ಶಿ (ಪ್ರಭಾರ), ಉಡುಪಿ ತಾಲೂಕಿನ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ, ಉಡುಪಿ, (3) ಶ್ರೀಮತಿ ಕೆ. ಚಂದ್ರ ಪ್ರತಿಮಾ, ಉಪ ನಿಬಂಧಕರು (ಪ್ರಭಾರ), ಸಹಕಾರ ಸಂಘಗಳ ಉಪ ನಿಬಂಧಕರವರ ಕಛೇರಿ, ರಜತಾದ್ರಿ, ಮಣಿಪಾಲ್ ಮತ್ತು (4) ಶ್ರೀ ಪ್ರವೀಣ್ ಬಿ. ನಾಯಕ್, ಉಪ ನಿಬಂಧಕರು, ಸಹಕಾರ ಸಂಘಗಳ ಉಪ ನಿಬಂಧಕರವರ ಕಛೇರಿ, ರಜತಾದ್ರಿ, ಮಣಿಪಾಲ್ (ಇನ್ನು ಮುಂದೆ ಇವರುಗಳನ್ನು 2 ರಿಂದ 4ನೇ ಎದುರುದಾರರು ಎಂದು ಅನುಕ್ರಮವಾಗಿ ಅನುಕೂಲಕ್ಕಾಗಿ ಸಂಭೋದಿಸಲಾಗುವುದು) ಇವರುಗಳು ಶಾಮೀಲಾಗಿ ದುರ್ನಡತೆ ಎಸಗಿದ್ದಾರೆಂದು ಸಲ್ಲಿಸಿದ ದೂರಿನ

ಮೇರೆಗೆ ಇವರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9ರಡಿ ಪ್ರದತ್ತವಾದ ಅಧಿಕಾರದನ್ವಯ ಮಾನ್ಯ ಗೌರವಾನ್ವಿತ ಉಪಲೋಕಾಯುಕ್ತರು ಆದೇಶಿಸಿದಂತೆ ಪ್ರಕರಣದ ತನಿಖೆಯನ್ನು ಕೈಗೊಳ್ಳಲಾಗಿದೆ.

**2. ಪ್ರಕರಣದ ಸಾರಾಂಶ:**

ಒಂದನೇ ಎದುರುದಾರರಾದ ಶ್ರೀ ಎನ್. ಜಯಕರ ಶೆಟ್ಟಿ, ಲೆಕ್ಕಾಧಿಕಾರಿ, ಉಡುಪಿ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ, ಉಡುಪಿ ಇವರು ಉಡುಪಿ ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘದಲ್ಲಿ ತಮ್ಮ ವಯೋ ನಿವೃತ್ತಿಯ ವಯಸ್ಸು ಮುಗಿದಿದ್ದರೂ, ಸುಳ್ಳುಮಾಹಿತಿಮೇರೆಗೆ ಸದರಿ ಸಹಕಾರ ಸಂಘದಲ್ಲಿ ಅವರನ್ನು ಕೆಲಸದಲ್ಲಿ ಮುಂದುವರೆಸಲು ಠರಾವನ್ನು/ತೀರ್ಮಾನವನ್ನು ಕೈಗೊಳ್ಳುವಂತೆ ಮಾಡಿರುತ್ತಾರೆ. 2ನೇ ಎದುರುದಾರರು ಸುಳ್ಳು ಮಾಹಿತಿ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ದಾಖಲೆ ಸರಿ ಇದೆ ಎಂದು ವರದಿ ಸಲ್ಲಿಸಿ, 1ನೇ ಎದುರುದಾರರಿಗೆ ಕಾನೂನಿನ ಚೌಕಟ್ಟನ್ನು ಮೀರಿ ಸಹಾಯ ಮಾಡಿ ಅವರು ಕೆಲಸದಲ್ಲಿ ಮುಂದುವರೆದು ಹಣವನ್ನು ದುರುಪಯೋಗಪಡಿಸಿಲು ಸಹಕರಿಸಿರುತ್ತಾರೆ (ಕಾನೂನಿನ ಪ್ರಕಾರ ಸಂಬಳಕ್ಕೆ ಅರ್ಹರಲ್ಲದಿದ್ದರೂ ಸಂಬಳ ಪಡೆದಿರುತ್ತಾರೆ). 1ನೇ ಎದುರುದಾರರು ಜನ್ಮ ದಿನಾಂಕ ಬದಲಾದ ಬಗ್ಗೆ ಯಾವುದೇ ನ್ಯಾಯಾಲಯದ ಆದೇಶವಾಗಲೀ ಅಥವಾ ಪ್ರಾಧಿಕಾರದ ಆದೇಶವಾಗಲೀ ಇರುವುದಿಲ್ಲ. 1ನೇ ಎದುರುದಾರರು ಜನ್ಮ ದಿನಾಂಕದ ತಿದ್ದುಪಡಿಗೆ ಸಲ್ಲಿಸಿದ ಅಸಲು ದಾವೆ ಸಂಖ್ಯೆ.166/1983 ವಜಾಗೊಂಡಿರುತ್ತದೆ. ಈ ವಿಚಾರವನ್ನು 3 ಮತ್ತು 4ನೇ ಎದುರುದಾರರ ಗಮನಕ್ಕೆ ತಂದರೂ ಯಾವುದೇ ಕ್ರಮ ಜರುಗಿಸದೇ ದುರ್ನಡತೆ ಎಸಗಿಸಿರುತ್ತಾರೆಂಬುದಾಗಿದೆ.

3. ದೂರಿನ ಆಧಾರದ ಮೇಲೆ ಎದುರುದಾರರಿಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಿ ನೊಂದಾಯಿತ ಅಂಚೆ ಮೂಲಕ ಪತ್ರವನ್ನು ರವಾನಿಸಲಾಗಿದ್ದು, 1, 2 ಮತ್ತು 4ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ 1, 2, ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಡುಪಿ ಸಿವಿಲ್ ನ್ಯಾಯಾಲಯದಲ್ಲಿದ್ದ ಅ.ದಾ.ಸಂಖ್ಯೆ.166/83 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಹೊರಡಿಸಿರುವ ಆದೇಶದಂತೆ, 1ನೇ ಎದುರುದಾರರಿಗೆ 3 ವರ್ಷಗಳ ಸೇವೆಯನ್ನು ವಿಸ್ತರಿಸಿ ಠರಾವು ಹೊರಡಿಸಲಾಗಿದ್ದು, ಅದರಂತೆ ಅವರ ಸೇವೆಯನ್ನು ದಿ. 31.8.2014ರಿಂದ ಮುಂದುವರಿಸಲಾಗಿರುತ್ತದೆ. ಈ ಸಂಬಂಧ ದೂರುದಾರರ ವಿರುದ್ಧ ಖಂಡನಾ ನಿರ್ಣಯವನ್ನು ಸಂಸ್ಥೆಯಲ್ಲಿ ಕೈಗೊಳ್ಳಲಾಗಿರುತ್ತದೆ. ಇದಲ್ಲದೆ, 1ನೇ ಎದುರುದಾರರ ಸೇವೆಯನ್ನು 3 ವರ್ಷಗಳ ಕಾಲಕ್ಕೆ ವಿಸ್ತರಿಸಿದ ಕಾರಣ ದೂರುದಾರರು ಯಾವ ರೀತಿ ಬಾಧಿತರಾಗಿರುತ್ತಾರೆಂಬ ಬಗ್ಗೆ ದೂರುದಾರರು ತಿಳಿಸಿರುವುದಿಲ್ಲ. ಇದಲ್ಲದೆ, ಈ ಪ್ರಕರಣವು ಲೋಕಾಯುಕ್ತ

(31)

ಸಂಸ್ಥೆಯ ಅಧಿಕಾರ ವ್ಯಾಪ್ತಿಗೆ ಒಳಪಡುವುದಿಲ್ಲ. ಆದ್ದರಿಂದ, ತಮ್ಮ ಮೇಲಿನ ತನಿಖೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

4. ಏತನ್ಮಧ್ಯೆ, ದೂರುದಾರರು ಈ ಇಲಾಖೆಗೆ ದಿನಾಂಕ 09.01.2014 ರಂದು ಪತ್ರ ಬರೆದು ಅದರೊಡನೆ ದಾಖಲೆಗಳನ್ನು ಅಡಕ ಮಾಡಿ ಎದುರುದಾರರ ಅಕ್ರಮ ನಿರ್ಣಯದಿಂದ ಯಾವ ರೀತಿ ನಿರುದ್ಯೋಗಿಗಳು ಹಾಗೂ ಸದರಿ ವ್ಯವಸಾಯ ಮಾರಾಟ ಸಹಕಾರ ಸಂಘದಲ್ಲಿ ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಪದೋನ್ನತಿ ಸಿಗದೆ ಅನ್ಯಾಯವಾಗಿರುತ್ತದೆ ಎಂಬ ಬಗ್ಗೆ ವಿವರಿಸಿರುತ್ತಾರೆ.

5. ದೂರಿನ ಅಂಶಗಳನ್ನು ಎದುರುದಾರರ ಆಕ್ಷೇಪಣೆಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದಲ್ಲಿ, ಪ್ರಮುಖ ದೂರಿನ ಅಂಶಗಳೇನೆಂದರೆ 1ನೇ ಎದುರುದಾರರ ಹುಟ್ಟಿದ ದಿನಾಂಕ 20/7/1954 ಎಂದು ಇದ್ದು, ಅದನ್ನು ಅಕ್ರಮವಾಗಿ 04/08/1957 ಎಂದು ತಿದ್ದುಪಡಿ ಮಾಡಿಕೊಂಡು ನಿವೃತ್ತಿ ದಿನಾಂಕವನ್ನು 31/08/2017ರವರೆಗೆ ಅಂದರೆ ಮೂರು ವರ್ಷಗಳ ಕಾಲಕ್ಕೆ ವಿಸ್ತರಿಸಿಕೊಂಡಿರುತ್ತಾರೆಂದು ಇರುತ್ತದೆ. ಈ ಬಗ್ಗೆ ಪ್ರಕರಣದಲ್ಲಿ ದೂರುದಾರರು ಮತ್ತು ಎದುರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದಲ್ಲಿ, 1ನೇ ಎದುರುದಾರರ ಹುಟ್ಟಿದ ದಿನಾಂಕ 20/07/1954 ಎಂದು ಇರುತ್ತದೆ. ಇದಲ್ಲದೆ, 1ನೇ ಎದುರುದಾರರು ತಮ್ಮ ಹುಟ್ಟಿದ ದಿನಾಂಕ 20/07/1954 ಎಂಬುದಾಗಿ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯಲ್ಲಿರುವುದು ಹಾಗೂ ಶಾಲಾ ಕ್ಯುಮ್ಯುಲೇಟೀವ್ ರಿಕಾರ್ಡ್‌ನಲ್ಲಿರುವುದು ಸರಿಯಲ್ಲವೆಂದು ಸದರಿ ಹುಟ್ಟಿದ ದಿನಾಂಕವು 04.08.1957 ಎಂದು ತಮ್ಮ ಹುಟ್ಟಿದ ದಿನಾಂಕ ಇರಬೇಕಾಗಿತ್ತೆಂದು, ಆದ್ದರಿಂದ ಈ ಬಗ್ಗೆ, ಘೋಷಣೆ ಮಾಡಿ ಸೂಕ್ತ ನಿರ್ದೇಶನ ನೀಡಿ ಆದೇಶ ಹೊರಡಿಸಬೇಕೆಂದು ಕೋರಿ ಅಸಲು ದಾವೆ ಸಂಖ್ಯೆ.166/1983ರನ್ನು ಉಡುಪಿಯ ಪ್ರಧಾನ ಮುನ್ಸಿಫ್ ನ್ಯಾಯಾಲಯದಲ್ಲಿ ಹೂಡಿರುವುದು ಸ್ಪಷ್ಟಪಡುತ್ತದೆ. ಸದರಿ ಆದೇಶದಲ್ಲಿ ಮಾನ್ಯ ನ್ಯಾಯಾಲಯವು " the entries maintained by the authority under the Registration of Births and Deaths Act of 1969 prevailed over any wrong or mistake entry, regarding the date of birth in the Cumulative Record or SSLC certificate and School Authority or Institution is bound to move the KSEEB and set-right such mistakes and if the school or institution pursues the matter, the KSEEB is bound to set-right such

(44)

mistakes which is autonomous body in correcting its own registers or documents" ಎಂದು ಅಭಿಪ್ರಾಯಪಟ್ಟಿರುವುದರಿಂದ, ಸದರಿ ಆದೇಶದಂತೆ, ಎದುರುದಾರರು ಉಡುಪಿ ತಾಲೂಕ್ ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ ಇವರು 1ನೇ ಎದುರುದಾರರ ಜನ್ಮ ದಿನಾಂಕವನ್ನು 04/08/1957 ಎಂದು ಬದಲಾಯಿಸಿ 1ನೇ ಎದುರುದಾರರಿಗೆ 3 ವರ್ಷಗಳ ಕಾಲಕ್ಕೆ ಸೇವೆಯನ್ನು ವಿಸ್ತರಿಸಿರುವುದು ಸ್ಪಷ್ಟಪಡುತ್ತದೆ. ಆದರೆ, ಮೇಲೆ ಹೇಳಿದ ಅ.ದಾ.ಸಂ.166/1983ರಲ್ಲಿ ಮಾನ್ಯ ನ್ಯಾಯಾಲಯವು ವಾದಿಯು ಕೋರಿರುವಂತೆ ಅವರ ಜನ್ಮ ದಿನಾಂಕವನ್ನು ಬದಲಾಯಿಸಿ ದಿನಾಂಕ 04.08.1957 ಎಂದು ಘೋಷಿಸಿರುವುದಿಲ್ಲ ಬದಲಾಗಿ ಅಂತಹ ಬದಲಾವಣೆಯನ್ನು ಎಸ್.ಎಸ್.ಎಲ್.ಸಿ. ಬೋರ್ಡಿನವರೇ ಮಾಡಬೇಕೆಂದು ತಿಳಿಸಿ ಪ್ರಕರಣವನ್ನು ವಜಾಗೊಳಿಸಿರುತ್ತದೆ. ಇಂತಹ ಆದೇಶವನ್ನು ಆಧರಿಸಿ, ಮೇಲೆ ಹೇಳಿದ ಉಡುಪಿ ತಾಲೂಕ್ ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘ 1ನೇ ಎದುರುದಾರರಿಗೆ ಅವರ ಸೇವಾವಧಿಯನ್ನು 3 ವರ್ಷಗಳ ಕಾಲಕ್ಕೆ ವಿಸ್ತರಿಸಿರುವುದು ಸರಿಯಲ್ಲವೆಂದು ಕಂಡುಬರುತ್ತದೆ. ಎದುರುದಾರರು ಹಾಜರುಪಡಿಸಿರುವ ಜನನ ಪ್ರಮಾಣ ಪತ್ರದಲ್ಲಿ ಅವರ ಹುಟ್ಟಿದ ದಿನಾಂಕ 04.08.1957 ಎಂದು ಇರುತ್ತದೆ. 1ನೇ ಎದುರುದಾರರು ಮತ್ತೊಂದು ಜನನ ಪ್ರಮಾಣ ಪತ್ರವನ್ನು 15ನೇ ಲಗತ್ತು ಎಂದು ಹಾಜರುಪಡಿಸಿದ್ದು, ಅದರಲ್ಲಿ ಅವರ ಜನ್ಮ ದಿನಾಂಕವನ್ನು 17/9/1954 ಎಂದು. ನಮೂದು ಮಾಡಿರುವುದು ಕಂಡು ಬರುತ್ತದೆ. ಈ ಗೊಂದಲಗಳ ನಡುವೆ 1ನೇ ಎದುರುದಾರರು ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಗೆ ತಮ್ಮ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡುವ ಬಗ್ಗೆ ಮನವಿ ಸಲ್ಲಿಸಿದ್ದರೂ, ಸದರಿ ಮಂಡಳಿಯವರು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು, ಆದ್ದರಿಂದ, ತುಚಿ ದಿನಾಂಕ 23.2.2014 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.15329/2014 ಅನ್ನು ಸಲ್ಲಿಸಿದ್ದು, ಅದು ವಿಚಾರಣಾ ಹಂತದಲ್ಲಿರುತ್ತದೆ ಎಂದು, ಆದ್ದರಿಂದ, ತಾನು 31.7.2014ಕ್ಕೆ ತನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಆಧಾರದ ಮೇಲೆ ನಿವೃತ್ತಿ ಹೊಂದಬೇಕಾಗಿದ್ದರಿಂದ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತನಿಖೆಗೆ ಬಾಕಿ ಇರುವ ಆಧಾರದಲ್ಲಿ ಹಾಗೂ ಮಾನ್ಯ ಮುನ್ಸಿಫ್ ನ್ಯಾಯಾಲಯವು ಅ.ದಾ.166/83 ರಲ್ಲಿ ನೀಡಿರುವ ಅಭಿಪ್ರಾಯದಂತೆ ತನ್ನ ನಿವೃತ್ತಿ ದಿನಾಂಕವನ್ನು 3 ವರ್ಷಗಳವರೆಗೆ ವಿಸ್ತರಿಸಬೇಕೆಂದು ಕೋರಿ ಮನವಿ ಸಲ್ಲಿಸಿದ್ದು, ಅದರಂತೆ, ತನ್ನ ಮನವಿಯನ್ನು ಸದರಿ ಸಂಘವು ಪುರಸ್ಕರಿಸಿರುತ್ತದೆ ಎಂದು ತಿಳಿಸಿರುತ್ತಾರೆ.

6. ಆದರೆ, 1ನೇ ಎದುರುದಾರರು ತಿಳಿಸಿರುವಂತೆ ಮೇಲೆ ಹೇಳಿದ ಜನ್ಮ ದಿನಾಂಕದ ಗೊಂದಲದ ನಿವಾರಣೆಯ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅರ್ಜಿ ಸಂ.15329/2014 ವಿಲೆಗೆ ಬಾಕಿ

ಇರುವಾಗಲೇ ಸದರಿ ಉಡುಪಿಯ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ (ನಿಯಮಿತ)ದ 1ನೇ ಎದುರುದಾರರ ಜನ್ಮ ದಿನಾಂಕದ ತಿದ್ದುಪಡಿಯನ್ನು ಮಾಡಿಕೊಂಡು ಅವರ ಸೇವಾವಧಿಯನ್ನು 3 ವರ್ಷಗಳ ಕಾಲಕ್ಕೆ ವಿಸ್ತರಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಇದಲ್ಲದೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮೇಲೆ ಹೇಳಿದ ರಿಟ್ ಅರ್ಜಿಯಲ್ಲಿ ಯಾವುದೇ ತಾತ್ಕಾಲಿಕ ಆಜ್ಞೆಯನ್ನು ಸಹ ಮಾಡಿಲ್ಲವೆಂದು ದಾಖಲೆಗಳಿಂದ ಕಂಡುಬರುತ್ತದೆ. ಪ್ರೌಢ ಶಾಲಾ ಶಿಕ್ಷಣ ಮಂಡಳಿಯೂ ಸಹ ಯಾವುದೇ ಜನ್ಮ ದಿನಾಂಕದ ತಿದ್ದುಪಡಿ ಆದೇಶವನ್ನು ಹೊರಡಿಸಿರುವುದಿಲ್ಲ. ಈ ವಿಷಯವನ್ನು ಸಹ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಿಲೆಗೆ ಬಾಕಿಯಿರುವ ರಿಟ್ ಅರ್ಜಿಯಲ್ಲಿ ಸಹ ಪ್ರಸ್ತಾಪಿಸಲಾಗಿರುತ್ತದೆ. ಆದ್ದರಿಂದ, ಈ ನ್ಯೂನ್ಯತೆಗಳ ಹಿನ್ನೆಲೆಯಲ್ಲಿ, ಸದರಿ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ (ನಿ.), ಉಡುಪಿ ಇದರ ಕಾರ್ಯದರ್ಶಿಯಾದ ಶ್ರೀಮತಿ ಕೆ. ಸರೋಜಿನಿ ಅವರು ಕೈಗೊಂಡಿರುವ ತೀರ್ಮಾನಕ್ಕೆ ಬಾಧ್ಯರಾಗಿರುತ್ತಾರೆ. ಅದೇ ರೀತಿ ದೂರುದಾರರು 3 ಮತ್ತು 4ನೇ ಎದುರುದಾರರುಗಳಾದ ಉಪ ನಿಬಂಧಕರುಗಳು, ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಮಣಿಪಾಲ್ ಇವರುಗಳ ಗಮನಕ್ಕೆ ಈ ಮೇಲಿನ ವಿಷಯಗಳನ್ನು ದೂರುದಾರರು ತಂದಿದ್ದರೂ ಸಹ ಯಾವುದೇ ಕ್ರಮ ಜರುಗಿಸದೇ ಕರ್ತವ್ಯಲೋಪವೆಸಗಿರುವುದು ಸ್ಪಷ್ಟಪಡುತ್ತದೆ. ಆದ್ದರಿಂದ, ಅಕ್ರಮವಾಗಿ ತಮ್ಮ ಸೇವಾವಧಿಯನ್ನು ವಿಸ್ತರಿಸಿಕೊಂಡಿರುವ 1ನೇ ಎದುರುದಾರರು ಹಾಗೂ ಅಕ್ರಮವಾಗಿ 1ನೇ ಎದುರುದಾರರ ಸೇವೆಯನ್ನು ವಿಸ್ತರಿಸಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿರುವ 2ರಿಂದ 4ನೇ ಎದುರುದಾರರು ಕರ್ತವ್ಯಲೋಪವೆಸಗಿರುವುದು ಸ್ಪಷ್ಟಪಡುತ್ತದೆ. ಆದ್ದರಿಂದ, ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

7. ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರುಗಳು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ **(1) ಶ್ರೀ ಎನ್. ಜಯಕರ ಶೆಟ್ಟಿ, ಲೆಕ್ಕಾಧಿಕಾರಿ, ಉಡುಪಿ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ, ಉಡುಪಿ (2) ಶ್ರೀ ಕೆ. ಸರೋಜಿನಿ, ಕಾರ್ಯದರ್ಶಿ (ಪ್ರಭಾರ), ಉಡುಪಿ ತಾಲೂಕ್ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ, ಉಡುಪಿ (3) ಶ್ರೀ ಕೆ. ಚಂದ್ರ ಪ್ರತಿಮಾ, ಉಪ ನಿಬಂಧಕರು (ಪ್ರಭಾರ), ಸಹಕಾರ ಸಂಘಗಳ ಉಪ ನಿಬಂಧಕರವರ ಕಛೇರಿ, ಮಣಿಪಾಲ್ ಮತ್ತು (4) ಶ್ರೀ ಪ್ರವೀಣ್ ಬಿ. ನಾಯಕ್, ಉಪ ನಿಬಂಧಕರು (ಪ್ರಭಾರ), ಸಹಕಾರ ಸಂಘಗಳ ಉಪ ನಿಬಂಧಕರವರ ಕಛೇರಿ, ಮಣಿಪಾಲ್ ರವರುಗಳ** ವಿರುದ್ಧ ಶಿಸ್ತು ನಡವಳಿಕೆ ಕ್ರಮ

ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/7/16.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ),**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.–**

1/7/16